## ರಾಷ್ಟ್ರೀಯ ಸೇವಾ ಯೋಜನೆಯ ವಿಶೇಷ ಶಿಬಿರ 2017–2018

### ದತ್ತು ಗ್ರಾಮ: ನಯಾನಗರ ತಾಲೂಕ ಬೈಲಹೊಂಗಲ

### ಸಂಕ್ಷಿಪ್ತ ವರದಿ

### ಉದ್ಘಾಟನಾ ಸಮಾರಂಭ: ಶುಕ್ರವಾರ, ದಿನಾಂಕ. 02–02–2018

ಶುಕ್ರವಾರ, ದಿ. 02–02–2018 ರಂದು ಸಾಯಂಕಾಲ 5–00 ಘಂಟೆಗೆ ಉದ್ಘಾಟನಾ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಕು.ರಶ್ಮಿ ರಾಹುತ ಪ್ರಾರ್ಥನಾ ಗೀತೆ ಹಾಡಿದರು. ಕು.ರಶ್ಮಿ ರಾಹುತ, ಶ್ರೀ ಜೈನುಲ್ಲಾ ಬಾರಿಗಿಡದ ಹಾಗೂ ಸಂಗಡಿಗರು .ಎನ್.ಎಸ್.ಎಸ್. ಗೀತೆ ಹಾಡಿದರು. ಸನ್ಮಾನ್ಯ ಶ್ರೀ ವ್ಹಿ.ವ್ಹಿ.ಪಾಟೀಲ ನಿರ್ದೇಶಕರು ಕೆ.ಆರ್.ಸಿ.ಇ.ಸಂಸ್ಥೆ ಹಾಗೂ ಕಾಲೇಜು ಉಪಸಮಿತಿ ಚೇರಮನ್ನರು ಬೈಲಹೊಂಗಲ ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು. ನಂತರ ಮಾತನಾಡಿದ ಅವರು ಎನ್.ಎಸ್.ಎಸ್.ವಿದ್ಯಾರ್ಥಿಗಳು ಶಿಸ್ತು, ಸಂಯಮ ಹೊಂದಿರಬೇಕು. ಆ ಮೂಲಕ ಗ್ರಾಮದ ಎಲ್ಲರ ಮನ ಗೆಲ್ಲಬೇಕು ಎಂದು ತಿಳಿಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀ ಎಮ್ ಬಿ ಹೊಸಮನಿ ಸಹಾಯಕ ಕೃಷಿ ನಿರ್ದೇಶಕರು ಬೈಲಹೊಂಗಲ. ಇವರು ಸಿರಿ ಧಾನ್ಯದ ಬಗ್ಗೆ ಮಾಹಿತಿಯನ್ನು ನೀಡಿದರು. ಊರ ಪ್ರಮುಖರಾ ಶ್ರೀ ದ್ಯಾಮನಗೌಡ ಎಸ್ ಶೀಲವಂತರ ಹಾಗೂ ಶ್ರೀ ನಾರಾಯಣರಾವ ನಲವಡೆ ಇವರುಗಳು ಶಿಬಿರಾರ್ಥಿಗಳು ರಚನಾತ್ಮಕ ಕಾರ್ಯಗಳನ್ನು ಮಾಡುವ ಮೂಲಕ ಎನ್.ಎಸ್.ಎಸ್.ನ ಉದ್ದೇಶ ಈಡೇರಿಸಬೇಕೆಂದು ತಿಳಿಸಿದರು. ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಡಾ. ವಾಯ ಜಿ ಬಾಳಿಗಟ್ಟಿ ಅವರು ಶಿಬಿರದ ಉದ್ದೇಶ ಈಡೇರಿಸುವುದಕ್ಕಾಗಿ ಪ್ರತಿಯೊಬ್ಬ ಶಿಬಿರಾರ್ಥಿಯು ಶ್ರಮಿಸಬೇಕೆಂದರು. ವೇದಿಕೆಯ ಮೇಲೆ ಪ್ರೊ ಗಂಗಯ್ಯ ಹಿರೇಮಠ ಗುರುಪಾದ ಸೋಮಾಪೂರ  ತಾ.ಪಂ. ಸದಸ್ಯರಾದ ಶ್ರೀಮತಿ ವನಜಾಕ್ಷಿ ಪಾಟೀಲ ಪಿಡಿಓ,ಸೋಮನಗೌಡ ಎನ ಪಾಟೀಲ ಗ್ರಾ.ಪಂ. ಅಧ್ಯಕ್ಷರು  ಊರ ಗಣ್ಯರು ಹಾಗೂ ಶಿಬಿರಾರ್ಥಿಗಳು ಉಪಸ್ಥಿತರಿದ್ದರು. ಯೋಜನಾಧಿಕಾರಿ ಪ್ರೊ ಎಲ್ ಆರ್ ಡಿಂಡಲಕೊಪ್ಪ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿದ್ಯಾರ್ಥಿಯ ಕಾರ್ಯದರ್ಶಿ ಕುಮಾರ ಶಿವರಾಜ ಎಸ್ ಉಪ್ಪಾರ ರಾಷ್ಟ್ರೀಯ ಐಕ್ಯತಾ ಪ್ರಮಾಣ ವಚನ ಬೋಧಿಸಿದರು. ಕುಮಾರ ಕಿರಣ ಕೇರಿಕಾಯಿ ಕಾರ್ಯಕ್ರಮವನ್ನು  ನಿರೂಪಿಸಿದರು. ಕುಮಾರ ಅಕ್ಷಯಕುಮಾರ ಬಡಿಗೇರ ವಂದಿಸಿದರು.

### ಶನಿವಾರ, ದಿನಾಂಕ. 03–02–2018 ಎರಡನೆಯ ದಿನದ ವರದಿ

ಶಿಬಿರದ ಎರಡನೆಯ ದಿನವಾದ ಶನಿವಾರ, ದಿನಾಂಕ: 03–02–18 ಮುಂಜಾನೆ 8–00 ಘಂಟೆಗೆ ಎನ್.ಎಸ್.ಎಸ್.ಧ್ವಜಾರೋಹಣ ನೆರವೇರಿಸಲಾಯಿತು. ಧ್ವಜಾರೋಹಣ ನೆರವೇರಿಸಿ ಮಾತನಾಡಿದ **ಶ್ರೀ ನಾರಾಯಣ ನಲವಡೆ ಮಾಜಿ ಅಧ್ಯಕ್ಷರು ನವಚೇತನ ಯುವಕರ ಸಂಘ ನಯಾನಗರ** ಶಿಬಿರಾರ್ಥಿಗಳು ಸ್ವಯಂ ಸ್ಫೂರ್ತಿಯಿಂದ ಸಮಾಜದ ಸೇವೆ ಮಾಡಬೇಕೆಂದು ತಿಳಿಸಿದರು. ಶಿಬಿರಾಧಿಕಾರಿಗಳಾದ ಪ್ರೊ ಎಲ್ ಆರ್ ಡಿಂಡಲಕೊಪ್ಪ ಸ್ವಾಗತಿಸಿದರು. ಕುಮಾರ ಕಿರಣ ಕೇರಿಕಾಯಿ ವಂದಿಸಿದರು.

ಉಪಹಾರ ಮುಗಿದ ಬಳಿಕ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಪ್ರೌಢ ಶಾಲೆಯ ಆವರಣದಲ್ಲಿ ಶಿಬಿರಾರ್ಥಿಗಳಿಂದ ಶ್ರಮದಾನ ನಡೆಯಿತು.

ಸಾಯಂಕಾಲ 5–00 ಘಂಟೆಗೆ ವಿಶೇಷ ಉಪನ್ಯಾಸ ಅಫರಾಧ ತಡೆಯುವಲ್ಲಿ ಸಾರ್ವಜನಿಕರ ಪಾತ್ರ ಹಾಗೂ ಕಾನೂನು ತಿಳುವಳಿಕೆ ಕಾರ್ಯಕ್ರಮದಲ್ಲಿ ನ್ಯಾಯವಾದಿಗಳಾದ ಶ್ರೀ ಎಸ್.ಪಿ.ಗದಗ ಅವರು ವಾಹನ ಕಲಿಕೆ ಲೈಸನ್ಸ್

Scanned by CamScanner

ಕುರಿತು ಮಾತನಾಡಿದರು. ಸನ್ಮಾನ್ಯ ಶ್ರೀ ದೀಪಕ ಎಸ್ ಸಂಗೊಳ್ಳಿ ನಿರ್ದೇಶಕರು ಕೆ.ಆರ್.ಸಿ.ಇ.ಸಂಸ್ಥೆ ಬೈಲಹೊಂಗಲ ಅಧ್ಯಕ್ಷತೆ ವಹಿಸಿ ಮಾತನಾಡುತ್ತ ಕಾನೂನು ನೆರವು ಸಮಿತಿಯಿಂದ ಸಿಗುವ ಸೌಲಭ್ಯಗಳನ್ನು ಎಲ್ಲರೂ ಸದುಪಯೋಗಪಡಿಸಿಕೊಳ್ಳಬೇಕೆಂದು ತಿಳಿಸಿದರು. ಶಿಬಿರಾಧ್ಯಕ್ಷರಾದ ಡಾ. ವಾಯ್ ಜಿ ಬಾಳಿಗಟ್ಟಿ ಸ್ವಾಗತಿಸಿದರು ಅತಿಥಿಗಳಾಗಿ ಸ್ರೀ ವೀರನಗೌಡ ಎಮ್ ಮಲ್ಲೆಪ್ಪನವರ , ಮಹಾಂತಶ ವಿ ಪಾಟೀಲ ಉಪಸ್ಥಿತರಿದ್ದರು ಪತ್ರಕರ್ತರಾದ ಶ್ರೀ ಮಹಾಂತೇಶ ರಾಜಗೋಳಿ,ಮತ್ತು ಶ್ರೀ ಸಿ ವಾಯ್ ಮೆಣಸಿನಕಾಯಿ, ಹಾಜರಿದ್ದರು. ಕುಮಾರ ಶಿವರಾಜ ಎಸ್ ಉಪ್ಪಾರ ಕಾರ್ಯಕ್ರಮ ನಿರೂಪಿಸಿದರು. ಶ್ರೀ ಆರ್ ಎಸ್ ಕಾಶೇನ್ನವರ ಮಾಲಾರ್ಪಣೆ ನಡೆಸಿಕೊಟ್ಟರು. ಪ್ರೊ. ಎಲ್ ಆರ್ ಡಿಂಡಲಕೊಪ್ಪ ವಂದಿಸಿದರು.

**ರವಿವಾರ, ದಿನಾಂಕ. 04–02–2018 ಮೂರನೆಯ ದಿನದ ವರದಿ**

ಶಿಬಿರದ ಮೂರನೆಯ ದಿನವಾದ ರವಿವಾರ, ದಿನಾಂಕ: 04–02–18 ಮುಂಜಾನೆ 8–00 ಘಂಟೆಗೆ ಎನ್.ಎಸ್.ಎಸ್.ಧ್ವಜಾರೋಹಣ ನೆರವೇರಿಸಲಾಯಿತು. ಶ್ರೀ ದ್ಯಾಮನಗೌಡ ಎಸ ಶಿಲವಂತರ ಹಿರಿಯ ನಾಗರಿಕರ ನಯಾನಗರ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು. ಶಿಬಿರಾಧಿಕಾರಿಗಳಾದ ಪ್ರೊ ಎಲ್ ಆರ್ ದಿಂಡಲಕೊಪ್ಪ ಸ್ವಾಗತಿಸಿದರು. ಕುಮಾರ ಕೀರಣ ಕೇರಿಕಾಯಿ ವಂದಿಸಿದರು.

ಉಪಹಾರ ನಂತರ ಮುಂಜಾನೆ 10.00 ಗಂಟೆಗೆ ರೋಟರಿ ಸಂಸ್ಥೆ ಬೈಲಹೊಂಗಲ ಇವರ ವತಿಯಿಂದ ಆರೋಗ್ಯ ತಪಾಸಣೆ ಶಿಬಿರವನ್ನು ಹಮ್ಮಿಕೊಳ್ಳಲಾಯಿತ್ತು. ಇದರ ಅಧ್ಯಕ್ಷತೆಯನ್ನು ಶ್ರೀ ಬೊಮ್ಮನಾಯ್ಕ ಪಾಟೀಲ.ವಹಿಸಿದ್ದರು. ಆರೋಗ್ಯ ತಪಾಸಣೆಯನ್ನು ಡಾ ಎಮ್ ಎಸ ಮುದಕನಗೌಡರ ಹಾಗೂ ಡಾ ಸಿ ಡಿ ಕುಲಕರ್ಣಿ ನೇರವೇರಿಸಿದರು.

ಸಾಯಂಕಾಲ 4–00 ಘಂಟೆಗೆ ಗ್ರಾಮದ ರಸ್ತೆಗಳ ಸ್ವಚ್ಛತೆ ಹಾಗು ನೈರ್ಮಲ್ಯಕರಣದ ವಿಷಯ. ಇದರ ಅಧ್ಯಕ್ಷತೆಯನ್ನು ಶ್ರೀ ವ್ಹಿ ಎಸ್ ಬೆಲ್ಲದ ನಿರ್ದೇಶಕರು ಕೆ ಆರ್ ಸಿ ಇ ಎಸ್ ಕಾಲೇಜ ಬೈಲಹೊಂಲಗ ಇವರು ಮತನಾಡಿ ಯುವಜನರು ಗ್ರಾಮದ ರಸ್ತೆಗಳ ಸ್ವಚ್ಛತೆ ಬಗ್ಗೆ ಅರಿವು ಮೂಡಿಸಿ ರೋಗ ಮುಕ್ತ ಗ್ರಾಮವನ್ನಾಗಿ ಮಾಡಬೇಕೆಂದು ಪರಿಪರಿಯಾಗಿ ತಿಳಿಸಿದರು. ಅತಿಥಿ ಉಪನ್ಯಾಸಕರಾದ ಶ್ರೀ ಗಿರಿಶ ಮಾಯನ್ನವರ ವೈಧ್ಯಾಧಿಕಾರಿಗಳು ಗ್ರಾಮದ ರಸ್ತೆಗಳ ಸ್ವಚ್ಛತೆ ಹಾಗು ನೈರ್ಮಲ್ಯಕರಣದಿಂದ ರೋಗಗಳು ಹರಡುವುದನ್ನು ತಪ್ಪಿಸಬಹುದು. ಎಂದು ತಿಳಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಸಿ ಎಸ್ ಸಾಧುನವರ. ಶ್ರೀ ಈಶ್ವರ ಹೋಟಿ ಪತ್ರಕರ್ತರು ಹಾಗು ಶ್ರೀ ನಾರಾಯಣ ಶೀರೋಮಣಿ ಶ್ರೀಮತಿ ದೀಪಾ ಮುತವಾಡ ಶ್ರೀ ಮುದಕಪ್ಪ ತೋಟಗಿ ಉಪಸ್ಥಿತರಿದ್ದರು. ಪ್ರೊ ಎಲ್ ಆರ್ ದಿಂಡಲಕೋಪ್ಪ ಸ್ವಾಗತಿಸಿದರು. ಶಿಬಿರಾರ್ಥಿ ಕುಮಾರ ಶಿವರಾಜ ಉಪ್ಪಾರ ನಿರೂಪಿಸಿದರು. ಕುಮಾರ ಕೀರಣ ಕೇರಿಕಾಯಿ ವಂದಿಸಿದರು.

**ಸೋಮವಾರ, ದಿನಾಂಕ. 05–02–2018 ನಾಲ್ಕನೆಯ ದಿನದ ವರದಿ**

ಶಿಬಿರದ ನಾಲ್ಕನೆಯ ದಿನವಾದ ಸೋಮವಾರದಂದು ಮುಂಜಾನೆ 8–00 ಘಂಟೆಗೆ ಎನ್.ಎಸ್.ಎಸ್. ಧ್ವಜಾರೋಹಣ ನೆರವೇರಿಸಲಾಯಿತು. ಹಿರಿಯನಾಗರಿಕರಾದ ಶ್ರೀ ನಾರಾಯಣ ನಲವಡೆ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು. ಕುಮಾರಿ ರಜನಿ ರಾಹುತ ಸ್ವಾಗತಿಸಿದಳು. ಶಿಬಿರಾರ್ಥಿ ನೇತ್ರಾವತಿ ಬನವಿ ವಂದಿಸಿದಳು.

ಮುಂಜಾನೆ ಉಪಹಾರದ ನಂತರ 10.00 ಘಂಟೆಯಿಂದ ಮದ್ಯಾಹ್ನ 2.00 ಘಂಟಯ ವರೆಗೆ ಗ್ರಾಮಗಳ ರಸ್ತೆ ಸ್ವಚ್ಚತೆ ಮತ್ತು ಬಸವೇಶ್ವರ ದೇವಸ್ಥಾನದ ಆವರಣದ ಸ್ವಚ್ಚತೆಯನ್ನು ನಡೆಸಲಾಯಿತ್ತು.

ಸಾಯಂಕಾಲ 4.00 ಘಂಟೆಗೆ ಮಹಿಳೆಯರ ಆರೋಗ್ಯ ಮತು ಜಾಗೃತೆ ವಿಷಯ. ಅಧ್ಯಕ್ಷತೆಯನ್ನು ಶ್ರೀ ಆರ್ ಎಸ್ ಗಡತರನವರ ಕೆ ಆರ್ ಸಿ ಎಸ್ ಬೈಲಹೊಂಗಲ ಇವರು ವಹಿಸಿದ್ದರು ಇವರು ಮಹಿಳೆಯರ ಆರೋಗ್ಯದ ಬಗ್ಗೆ

Scanned by CamScanner

ಹೆಚ್ಚಿನ ಕಾಳಜಿವಹಿಸಿ ಆರೋಗ್ಯದಿಂದ ಇರಬೇಕು ತಮ್ಮ ಜೊತೆಗೆ ಮಕ್ಕಳನ್ನು ಕೂಡಾ ಸ್ವಚ್ಛತೆಯಿಂದ ಇಡಬೇಕೆಂದು ಉದಾಹರಣೆಗಳನ್ನು ಕೊಟ್ಟು ತಿಳಿಸಿ ಹೇಳಿದರು ಅತಿಥಿ ಉಪನ್ಯಾಸಕರಾದ ಡಾ.ಸಂಗನಾಥ ಎಮ್ ಲೋಕಾಪೂರ ಇವರು ಜಾನಪದ ಸಾಹಿತ್ಯದಲ್ಲಿ ಮಹಿಳೆಯರ ಪಾತ್ರ ಬಹು ಮುಖ್ಯವಾದ್ದು ಎಂದು ತಿಳಿಸಿದರು. ಶ್ರೀ ಎನ ಕೆ ಏಣಗಿ ಮಾತನಾಡಿ ಇತ್ತಿಚಿನ ದಿನಮಾನಗಳಲ್ಲಿ ಮಹಿಳೆಯರು ಪ್ಯಾಶನ್‌ನ್ಯದ ವ್ಯಾಹಮೋಕ್ಕಾಗಿ ಒಳಗಾಗಿ ತಮ್ಮ ಆರೋಗ್ಯದ ಕಡ ಗಮನ ನೀಡದೆ ಇರುವುದು ವಿಷಾದನೀಯ ಎಂದು ತಿಳಿಸಿದರು ಆದ್ದರಿಂದ ತಾವೇಲ್ಲರೂ ತಮ್ಮ ಆರೋಗ್ಯ ಕಡೆ ಹೆಚ್ಚಿನ ಗಮನವನ್ನು ನೀಡಬೇಕೆಂದು ತಿಳಿಸದರು. ಮುಖ್ಯ ಅತಿಥಿಗಳಾದ ಶ್ರೀ ಮಂಜುನಾಥ ಸಂಗೋಳ್ಳಿ ಶ್ರೀ ನಾರಾಯಣ ನಲವಡೆ ಶ್ರೀ ವಿಠ್ಠಲ ಸಿದ್ರಾಮನ್ನವರ ಹಾಗೂ ಪತ್ರಕರ್ತರಾದ ಶ್ರೀ ರಾಜು ಬಡಿಗೇರ ಮತ್ತು ಶ್ರೀ ಉದಯ ಕೋಳೆಕರ ಉಪಸ್ಥಿರಿದ್ದರು. ಶ್ರೀ ಎಲ್ ಆರ್ ಡಿಂಡಲಕೊಪ್ಪ ಸ್ವಾಗತಿಸಿದರು. ಶಿಬಿರಾರ್ಥಿ ಕುಮಾರಿ ದೀಪಾ ಕುಲಕರ್ಣಿ ನಿರೂಪಿಸಿದರು. ಕುಮಾರಿ ಜ್ಯೋತಿ ಸೊಪ್ಪಿನ ವಂದಿಸಿದರು.

**ಮಂಗಳವಾರ, ದಿನಾಂಕ. 06-02-2018 ಐದನೆಯ ದಿನದ ವರದಿ**

ಶಿಬಿರದ ಐದನೇಯ ದಿನವಾದ ಮಂಗಳವಾರದಂದು ಮುಂಜಾನೆ 8-00 ಘಂಟೆಗೆ ಎನ್.ಎಸ್.ಎಸ್.ಧ್ವಜಾರೋಹಣ ನೆರವೇರಿಸಲಾಯಿತು. ಶ್ರೀ ವ್ಹಿ ಎಮ್ ಭಾಗಲ್ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು. ಶಿಬಿರಾರ್ಥಿಗಳು ಒಳ್ಳೆಯ ನಡತೆಯನ್ನು ಹೊಂದಿ ತಮ್ಮ ಪಾಲಕರಿಗೆ ಹೆಸರು ತರಬೇಕು. ಉತ್ತಮ ನಾಗರಿಕರಾಗಿ ದೇಶದ ಅಭಿವೃದ್ಧಿಗಾಗಿ ಶ್ರಮಿಸಬೇಕೆಂದು ನುಡಿದರು. ಅತಿಥಿಗಳಾಗಿ ಗ್ರಾ.ಪಂ.ಸದಸ್ಯರಾದ ಶ್ರೀ ದ್ಯಾಮನಗೌಡ ಶೀಲವಂತರ ಆಗಮಿಸಿದ್ದರು. ಪ್ರೊ ಎಲ್ ಆರ್ ದಿಂಡಲಕೊಪ್ಪ ಸ್ವಾಗತಿಸಿದರು. ಕುಮಾರಿ ಜ್ಯೋತಿ ಸೊಪ್ಪಿನ ವಂದಿಸಿದರು.

ಉಪಹಾರ ಮುಗಿದ ಬಳಿಕ ಬೆಳಗಿನ 10-00 ಗಂಟೆಗೆ ಗ್ರಾಮ ಪಂಚಾಯತ ಹಾಗೂ ಬಸವೇಶ್ವರ ದೇವಸ್ಥಾನ ಆವರಣ ಸ್ವಚ್ಛತೆ ನಡೆಸಲಾಯಿತು. ನಂತರ ಮುಂಜಾನೆ 11-00 ಗಂಟೆಗೆ AIDS/HIV ರ‍್ಯಾಲಿಯನ್ನು ನಡೆಸಲಾಯಿತು. ಇದರಲ್ಲಿ ಸ.ಹಿ.ಪ್ರಾ.ಶಾಲೆ, ಸ.ಪ್ರೌ.ಶಾಲೆ, ವಿದ್ಯಾರ್ಥಿಗಳು, ಎಸ್.ಡಿ.ಎಮ್.ಸಿ.ಅಧ್ಯಕ್ಷರು ಹಾಗೂ ಸದಸ್ಯರು, ಗ್ರಾಮ ಪಂಚಾಯತ ಸದಸ್ಯರು, ಸಿಬ್ಬಂದಿ ವರ್ಗ, ಶಿಬಿರಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಸಾಯಂಕಾಲ 4-00 ಘಂಟೆಗೆ 'ಮಹಾಮಾರಿ ಏಡ್ಸ್' ಕುರಿತು ಉಪನ್ಯಾಸ ಏರ್ಪಡಿಸಲಾಗಿತ್ತು. ಮಕ್ಕಳಿಗೆ ಮತ್ತು ಶಿಬಿರಾರ್ಥಿಗಳಿಗೆ AIDS/HIV ಕುರಿತು ಪ್ರಶ್ನೆ ಕೇಳುವ ಮೂಲಕ ಮಾತು ಆರಂಭಿಸಿದ ಡಾ॥ ಎಸ್ ಎಸ್ ಸಿದ್ದನವರ ಅವರು ಏಡ್ಸ್ ನಮ್ಮ ದೇಹದ ಪ್ರತಿರೋಧಕ ಶಕ್ತಿಯನ್ನು ನಾಶಗೊಳಿಸುತ್ತದೆ. ರೋಗಿ ಬಾಧಿತ ವ್ಯಕ್ತಿಯಲ್ಲಿ ಇದರ ಲಕ್ಷಣಗಳು ಬೇಗನೆ ಗೊತ್ತಾಗುವುದಿಲ್ಲ ಎಂದು ತಿಳಿಸಿದರು. ಮುಂದುವರೆದು ಮಾತನಾಡಿದ ಅವರು ರೋಗಿಗೆ ಬರುವ ವಿವಿಧ ರೋಗಗಳ ಸನ್ನಿವೇಶಗಳನ್ನು ವಿವರಿಸಿದರು. ಹದಿಹರೆಯದ ವಿದ್ಯಾರ್ಥಿಗಳಿಗೆ ಏಡ್ಸ್ ಕುರಿತಾದ ಅರಿವು ಇರಲೇಬೇಕು ಏಡ್ಸ್ ರೋಗಕ್ಕೆ ಬಲಿಯಾಗುವವರಲ್ಲಿ ಹೆಚ್ಚಿನವರು ಯುವಕರೇ ಆದ್ದರಿಂದ ಇಂತಹ ಶಿಬಿರಗಳು ಜನರಲ್ಲಿ ಜಾಗೃತೆ ಮೂಡಿಸುವಲ್ಲಿ ಸಹಾಯಕವಾಗಿವೆ ಎಂದರು. ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶ್ರೀ ಬಿ ಜಿ ಹರಕುಣೆ ಕೆ ಆರ್ ಸಿ ಇ ಎಸ್ ಸಂಸ್ಥೆ ಬೈಲಹೊಂಗಲ ಇವರು ಮಾತನಾಡಿ ಮನುಕುಲದ ಏಳ್ಗೆಗೆ ಮಾರಕವಾದ ಈ ರೋಗದ ಬಗ್ಗೆ ಯುವಕರು ಎಚ್ಚರದಿಂದಿದ್ದು ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕೆಂದು ತಿಳಿಸಿದರು. ಗ್ರಾಮಗಳಲ್ಲಿ ಇಂತಹ ಶಿಬಿರಗಳನ್ನು ಏರ್ಪಡಿಸುವುದು ಇಂದಿನ ಅವಶ್ಯಕತೆಯಾಗಿದೆ ಎಂದರು. ಸಮಾರಂಭದಲ್ಲಿ ಪತ್ರಕರ್ತರಾದ ಶ್ರೀ ಕುಮಾರ ರೆಶ್ಮಿ, ಹಾಗೂ ಶ್ರೀ ಷರೀಫ್ ನದಾಫ್, ಶ್ರೀ ಬಸವರಾಜ ಕೋಟಗಿ, ಶ್ರೀ ಶಿವನಗೌಡ ಪಾಟೀಲ ಸಿ.ವಾಯ್.ಮೆಣಸಿನಕಾಯಿ, ಮಹಾಂತೇಶ ರಾಜಗೋಳಿ ಮಾತನಾಡಿದರು. ಶ್ರೀ ಎಲ್ ಆರ್ ದಿಂಡಲಕೊಪ್ಪ ಸ್ವಾಗತಿಸಿದರು. ಕುಮಾರ ಪ್ರವೀನ ಕಾದ್ರೊಳ್ಳಿ ನಿರೂಪಿಸಿದರು. ಕುಮಾರ ಅಕ್ಷಯಕುಮಾರ ಬಡಿಗೇರ ವಂದಿಸಿದರು.

Scanned by CamScanner

**ಬುಧವಾರ, ದಿನಾಂಕ. 07–02–2018 ಆರನೆಯ ದಿನದ ವರದಿ**

ಶಿಬಿರದ ಆರ್ಕನೆಯ ದಿನವಾದ ಬುಧವಾರ ಮುಂಜಾನೆ 8–00 ಘಂಟೆಗೆ ಎನ್.ಎಸ್.ಎಸ್.ಧ್ವಜಾರೋಹಣ ನೆರವೇರಿಸಲಾಯಿತು. ಶ್ರೀ ರಂಗರಾಜ ನಲವಡೆ ಕಾರ್ಯಕ್ರಮಕ್ಕೆ ಆಗಮಿಸಿದ್ದರು. ಅವರು ಧ್ವಜಾರೋಹಣ ನೆರವೇರಿಸಿ ಮಾತನಾಡುತ್ತ ಶಿಬಿರಾರ್ಥಿಗಳು ಇದುವರೆಗೂ ಒಳ್ಳೆಯ ಕೆಲಸ ಮಾಡಿದ್ದೀರಿ ಇದನ್ನು ಹಿಗೇಯೇ ಮುಂದುವರೆಸಿಕೊಂಡು ಹೋಗಬೇಕೆಂದು ತಿಳಿಸಿದರು. ಕುಮಾರ ಕಿರಣ ಕೇರಿಕಾಯಿ ವಂದಿಸಿದರು. ಪ್ರೊ ಎಲ್ ಆರ್ ದಿಂಡಲಕೊಪ್ಪ ಸ್ವಾಗತಿಸಿದರು.

ಉಪಹಾರ ಮುಗಿದ ಬಳಿಕ ಶಿಬಿರಾರ್ಥಿಗಳು ಸ.ಪ್ರೌ.ಶಾಲೆ ಆವರಣ ಸ್ವಚ್ಛತೆ ಮತ್ತು ಯೋಗಾನಂದ ಮಠದ ಆವರಣ ಸ್ವಚ್ಛತೆಯ ಕಾರ್ಯಕ್ರಮವನ್ನು ಹಮ್ಮಿಕೋಳ್ಳಲಾಯಿತ್ತು.

ಸಂಜೆಯ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ರೈತರಿಗೆ ಕೃಷಿ ಇಲಾಖೆಯಿಂದ ಇರುವ ಸೌಲಭ್ಯಗಳ ಕುರಿತು ಕೃಷಿ ಅಧಿಕಾರಿಗಳಾದ ಶ್ರೀಮತಿ ಗೀತಾ ಹಿರೇಮಠ ಮಾತನಾಡಿದರು. ಮುಂದುವರೆದು ಮಾತನಾಡಿದ ಅವರು ರೈತರು ಕೃಷಿಯ ಜೊತೆಗೆ ಉಪಕಸುಬುಗಳಾದ ಕೋಳಿಸಾಕಾಣಿಕೆ, ಕುರಿಸಾಕಾಣಿಕೆ, ಹೈನುಗಾರಿಕೆ ಮಾಡುವುದರಿಂದ ಹೆಚ್ಚಿನ ಲಾಭ ಗಳಿಸಬಹುದು. ರಾಸಾಯನಿಕ ಗೊಬ್ಬರಗಳ ಬಳಕೆ ಸಂಪೂರ್ಣವಾಗಿ ಬಿಡುವುದು ಸಾಧ್ಯವಿಲ್ಲ ಬದಲು ಅದರ ಉಪಯೋಗ ಕಡಿಮೆ ಮಾಡಿ ರಾಸಾಯನಿಕ ಗೊಬ್ಬರಗಳಿಗೆ ಬದಲು ಕಾಂಪೋಷ್ಟ ಗೊಬ್ಬರ, ಜೈವಿಕ ಗೊಬ್ಬರ ಬಳಸುವುದು ಉತ್ತಮ ಎಂದರು. ರಾಸಾಯನಿಕ ಔಷಧಗಳ ಬದಲು ಬೇವು ಮತ್ತು ಮೆಣಸಿನಕಾಯಿ ಬಳಸಿ ಕ್ರಿಮಿಕೀಟಗಳ ಹತೋಟಿ ಮಾಡಬಹುದೆಂದರು. 'ವ್ಯಕ್ತಿತ್ವ ವಿಕಸನ' ಕುರಿತು ಶ್ರೀ ವ್ಹಿ ಎಮ್ ಭಾಗಲ್ ಉಪನ್ಯಾಸಕರು ಮಾತನಾಡಿದರು. ದೇಶವನ್ನು ಪ್ರೀತಿಸುವ ಅದರ ಅಭಿವೃದ್ಧಿಗಾಗಿ ದುಡಿಯುವ ಮನೋಭಾವ ಬೆಳೆಸಿಕೊಳ್ಳಿ ಎಂದು ತಿಳಿಸಿ ಹೇಳಿದರು. ಸ್ವಾಮಿ ವಿವೇಕಾನಂದರ ತತ್ವ ನಿಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಿ ಎಂದು ಯುವಕರನ್ನುದ್ದೇಶಿಸಿ ನುಡಿದರು. ಶ್ರೀ ಎಮ್ ವ್ಹಿ ವಾಲಿ.ಕೋಶ್ಯಾಧ್ಯಕ್ಷರು ಕೆಎಲ್‌ಇಸಂಸ್ಥೆ ಬೈಲಹೊಂಗಲ ಇವರು ಅಧ್ಯಕ್ಷತೆಯನ್ನು ವಹಿಸಿದ್ದರು. ಶಿಬಿರಾರ್ಥಿಗಳು ತಮ್ಮ ಜೀವನದಲ್ಲಿ ಶಿಸ್ತು ರೂಢಿಸಿಕೊಂಡು ಸಮಯಪ್ರಜ್ಞೆಯಿಂದ ಕೆಲಸ ನಿರ್ವಹಿಸಿದರೆ ಜೀವನದಲ್ಲಿ ಯಶಸ್ಸು ಗಳಿಸಬಹುದೆಂದು ಸೂಚಿಸಿದರು. ಪ್ರೊ ಎಲ್ ಆರ್ ದಿಂಡಲಕೊಪ್ಪ ಸ್ವಾಗತಿಸಿದರು. ಕುಮಾರಿ ರಜನಿ ರಾಹುತ ವಂದಿಸಿದರು.

**ಗುರುವಾರ, ದಿನಾಂಕ. 08–02–2018 ಸಮಾರೋಪ ಸಮಾರಂಭದ ವರದಿ**

ಶಿಬಿರದ ಏಳನೆಯ ದಿನವಾದ ಗುರುವಾರ ಮುಂಜಾನೆ 8–00 ಘಂಟೆಗೆ ಎನ್.ಎಸ್.ಎಸ್.ಧ್ವಜಾರೋಹಣ ನೆರವೇರಿಸಲಾಯಿತು. ಶ್ರೀಮತಿ ಲಕ್ಷ್ಮಿ ಬಿ ಉಜ್ಜಿನಕೊಪ್ಪ ಉಪಾಧ್ಯಕ್ಷರು ಧ್ವಜಾರೋಹಣ ಕಾರ್ಯಕ್ರಮ ನೆರವೇರಿಸಿದರು. ಶ್ರೀ ಧ್ಯಾಮನಗೌಡ ಎಸ್ ಶೀಲವಂತರ ಅತಿಥಿಗಳಾಗಿ ಆಗಮಿಸಿದ್ದರು. ಧ್ವಜಾರೋಹಣ ನೆರವೇರಿಸಿದ ನಂತರ ಶ್ರೀ ರಂಗರಾಜ ನಲವಡೆ ಅವರು ಶಿಬಿರಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ನಮ್ಮ ಗ್ರಾಮದಲ್ಲಿ ಒಳ್ಳೇಯ ಕಾರ್ಯಕ್ರಮವನ್ನು ನಡೆಸಿರುವಿರಿ ಇದೇ ರೀತಿ ಮುಂದುವರೆಸಿಕೊಂಡು ಹೋಗಬೇಕೆಂದು ತಿಳಿಸಿದರು. ಶ್ರೀ ಎಸ್ ಕೆ ಏಣಗಿ ನಿರೂಪಿಸಿದರು. ಕುಮಾರ ಕಿರಣ ಕೇರಿಕಾಯಿ ಸ್ವಾಗತಿಸಿದರು. ಕುಮಾರ ವಿಠ್ಠಲ ಸನ್ನಮ್ಮನವರ ವಂದಿಸಿದರು.

ಉಪಹಾರ ಮುಗಿದ ಬಳಿಕ ಶಿಬಿರಾರ್ಥಿಗಳು ಸ.ಪ್ರೌ.ಶಾಲೆ ಆವರಣದಲ್ಲಿ ನಡೆದ ಸ್ವಚ್ಛತಾ ಅಭಿಯಾನ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಯೋಜನಾಧಿಕಾರಿ ಪ್ರೊ ಎಲ್ ಆರ್ ದಿಂಡಲಕೊಪ್ಪ. ಶಿಬಿರಾರ್ಥಿಗಳು ಹಾಗೂ ಊರ ಗಣ್ಯರು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಮಾತನಾಡಿದ ಊರಿನ ಪ್ರಮುಖ ಹಿರಿಯರು ಪ್ರತಿಯೊಂದು ಗ್ರಾಮವು ನೈರ್ಮಲ್ಯವಾಗಿ ಇರಬೇಕಾದರೆ ನಮ್ಮ ನಮ್ಮ ಮನೆಗಳನ್ನು ಸ್ವಚ್ಚವಾಗಿಟ್ಟುಕೊಳ್ಳುವ ಕೆಲಸವಾಗಬೇಕೆಂದು

Scanned by CamScanner

ತಿಳಿಸಿದರು. ಎನ್ ಎಸ್ ಎಸ್ ದ ಕಾರ್ಯಕ್ರಮದ ಮೂಲಕ ಎಲ್ಲಾ ಯುವಕರು ಊರಿನ ಜನರಲ್ಲಿ ಜಾಗೃತಿಯನ್ನು ಮೂಡಿಸುವ ಕೆಲಸ ಮಾಡಬೇಕೆಂದು ತಿಳಿಸದರು.

ಮಧ್ಯಾಹ್ನ 1–30 ಕ್ಕೆ ನಡೆದ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀಯುತ ಮಹಾಂತೇಶ ಎಸ್ ಕೌಜಲಗಿ ವಹಿಸಿದ್ದರು. ಶಿಬಿರಾಧ್ಯಕ್ಷರಾದ ಡಾ ವಾಯ್ ಜಿ ಬಾಳಿಗಟ್ಟಿ ಪ್ರಾಚಾರ್ಯರು ಕೆಆರ್ ಸಿಇಎಸ್ ಪದವಿಮಹಾವಿದ್ಯಾಲಯ ಬೈಲಹೊಂಗಲ ಇವರು ವಾರ್ಷಿಕ ವಿಶೇಷ ಶಿಬಿರದ ಕಾರ್ಯಕ್ರಮದ ಮಹತ್ವವನ್ನು ಗ್ರಾಮದ ಜನತೆಗೆ ತಿಳಿಸಿದರು. ಗ್ರಾ.ಪಂ.ಸದಸ್ಯರಾದ ಶ್ರೀಮತಿ ಲಕ್ಷ್ಮಿ ಬಿ ಉಜ್ಜಿನಕೊಪ್ಪ ಶ್ರೀ ಮಹಾಬಳೇಶ್ವರ ಮೆರಕನವರ ಶ್ರೀ ಕ್ರೀಷ್ಣಾಜಿ ಯಲಗಾರ ಹಾಗೂ ಪತ್ರಕರ್ತರಾದ ಶ್ರೀ ರವಿ ಹುಲಕುಂದ ಉಪಸ್ಥಿರಿದ್ದರು ಶ್ರೀ ಆರ್ ಎಸ್ ಕಾಶನ್ನವರ ಮಾಲಾರ್ಪಣೆ ನಡೆಸಿಕೊಟ್ಟರು. ಶಿಬಿರಾರ್ಥಿಗಳಾದ ಕುಮಾರ ಕಿರಣ ಕೇರಿಕಾಯಿ ಹಾಗೂ ಕುಮಾರಿ ಜ್ಯೋತಿ ಸೊಪ್ಪಿನ ತಮ್ಮ ಅನುಭವ ಹಂಚಿಕೊಂಡರು. ಮುಖ್ಯ ಅತಿಥಿಗಳಾದ ಪ.ಪೂ.ಮಹಾವಿದ್ಯಾಲಯದ ಬ್ಯಲಹೊಂಲಗದ ಪ್ರಾಚಾರ್ಯ ಪ್ರೊ ಎಮ್ ಇಂಚಲ ಇವರು ಶಿಬಿರದ ಕುರಿತು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಶಿಬಿರಾಧಿಕಾರಿ ಪ್ರೊ ಎಲ್ ಆರ್ ದಿಂಡಲಕೊಪ್ಪ ವಂದಿಸಿದರು.

NSS Programme Officer
GGD Arts, BMP Com &
SVS Science College
Bailhongal- 591102

PRINCIPAL,
G.G.D. Arts, B.M.P. Commerce
And College
S V.S. Science College,
Bailhongal-591102.

Scanned by CamScanner